# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **446(502)** |
| ಸದಸ್ಯರ ಹೆಸರು | : | ಶ್ರೀ. ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21.02.2022. |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಒಂದೇ ಅಧಿಸೂಚನೆಯಲ್ಲಿ ಆಯ್ಕೆಯಾದ ಶಿಕ್ಷಕರಿಗೆ ಮೂಲ ವೇತನ ವ್ಯತ್ಯಾಸವಾಗಲು ಕೆ.ಸಿ.ಎಸ್.ಆರ್.ನಲ್ಲಿ ಅವಕಾಶ ಇದೆಯೇ: ಇದ್ದಲ್ಲಿ ನಿಯಮ ತಿಳಿಸುವುದು. | ಚಾಲ್ತಿಯಲ್ಲಿರುವ ಸೇವಾ ನಿಯಮಗಳ ಪ್ರಕಾರ ಸರ್ಕಾರಿ ನೌಕರನ ವೇತನ ಮತ್ತು ಭತ್ಯೆಯನ್ನು ಅವನು ನೇಮಕಗೊಂಡ ಹುದ್ದೆಗೆ ಕಾರ್ಯವರದಿ ಮಾಡಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಪರಿಗಣಿಸಿ ಕ್ರಮಬದ್ಧಗೊಳಿಸಲಾಗುತ್ತದೆ. ಪರಂತು. ಹುದ್ದೆಗಳ ನೇಮಕಾತಿ/ಆಯ್ಕೆ ಪ್ರಕ್ರಿಯೆಗೆ ಹೊರಡಿಸಲಾದ ಅಧಿಸೂಚನೆಯ ದಿನಾಂಕವನ್ನು ಆಧರಿಸಿ ನೌಕರರ ವೇತನ ಮತ್ತು ಭತ್ಯೆಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. |
| (ಆ) | 2007–2008ರ ಅಧಿಸೂಚನೆಯ 3350 ಪ್ರೌಢಶಾಲಾ ಶಿಕ್ಷಕರಲ್ಲಿ ಸುಮಾರು 1250 ಶಿಕ್ಷಕರಿಗೆ 2018ರ ಆರನೇ ವೇತನ ಆಯೋಗದಲ್ಲಿ ಒಂದು ಮೂಲ ವೇತನ ವ್ಯತ್ಯಾಸವಾಗುತ್ತಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ. | ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. |
| (ಇ) | ವೇತನ ತಾರತಮ್ಯಕ್ಕೆ ಸಂಬಂಧಿಸಿದಂತೆ 2007–2008ರ ಅಧಿಸೂಚನೆಯ ವೇತನ ವ್ಯತ್ಯಾಸವಾದ ಶಿಕ್ಷಕರ ಪರವಾಗಿ ಕೆ.ಎ.ಟಿ.ಯಲ್ಲಿ ಶಿಕ್ಷಕರ ಪರವಾಗಿ ಆದೇಶವಾಗಿದ್ದರೂ ಶಿಕ್ಷಕರಿಗೆ ಮೂಲವೇತನ ಸರಿ ಮಾಡದೇ ವಿಳಂಬ ಮಾಡಲು ಕಾರಣವೇನು; | ಸರ್ಕಾರದ ಆದೇಶ ಸಂಖ್ಯೆ: ಇಡಿ 255 ಎಸ್ಎಲ್‌ಬಿ 2016 ದಿನಾಂಕ:23.07.2018 ರಂತೆ ದಿನಾಂಕ: 01.08.2008ರ ನಂತರ ನೇಮಕಗೊಂಡ ಸರ್ಕಾರಿ/ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಕರುಗಳಿಗೆ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. |
| (ಈ) | ವಿಶೇಷ ಭತ್ಯೆ ಮತ್ತು ವೇತನ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶ ಇದ್ದರೂ ಒಂದೇ ಅಧಿಸೂಚನೆಯ ಶಿಕ್ಷಕರಿಗೆ ವೇತನ ತಾರತಮ್ಯವಿದ್ದರೂ ಕೆ.ಎ.ಟಿ. ವಿರುದ್ಧ ಮೇಲ್ಮನವಿ ಹೋಗಲು ಕಾರಣವೇನು? | ಮಾನ್ಯ ಕೆ.ಎ.ಟಿ. ತೀರ್ಪು ಸದರಿ ಸರ್ಕಾರದ ಆದೇಶಕ್ಕೆ ವ್ಯತಿರಿಕ್ತವಾಗಿರುವುದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಇಪಿ 39 ಎಸ್ಎಲ್‌ಬಿ 2022**

(ಬಿ.ಸಿ ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ
ಸಚಿವರು